## ಅಂಗೈಯಲ್ಲಿ ಅರಮನೆ

### ಡಯಟ್‌ನಲ್ಲಿ ಇದ್ದಾರೆ!

ಅಂದು ರವಿವಾರ. ಮಿತ್ರರು ನಮ್ಮೂರಿನ ಕಾರ್ಯಕ್ರಮಕ್ಕೆ ಬೇರೆಬೇರೆ ಊರುಗಳಿಂದ ಬರುವವರಿದ್ದು, ಬೆಳಗಿನ ಉಪಾಹಾರಕ್ಕೆ ನಮ್ಮ ಮನೆಗೆ ಬರಲು ಒಪ್ಪಿದ್ದರು.

ನನ್ನ ಮನೆಯಾಕೆ ಒತ್ತು ಶ್ಯಾವಿಗೆ ಮಾಡಿದ್ದಳು. ಒಬ್ಬೊಬ್ಬರೇ ಬಂದ ಹಾಗೆ ಬಂದವರಿಗೆ ತಿಂಡಿ ಕೊಡಲು ಹೇಳಿ ನಾನು ಬೇರೆ ಕೆಲಸದ ನಿಮಿತ್ತ ಹೊರಗೆ ಹೋಗಿದ್ದೆ. ನನ್ನ ಮಿತ್ರ ಹರಿಪ್ರಸಾದ್ ಮಾತ್ರ ಕೊನೆಯದಾಗಿ ಬಂದಿದ್ದ. ನಾನು ಮನೆಗೆ ಬಂದೊಡನೆ 'ಎಲ್ಲರದ್ದೂ ತಿಂಡಿ ಆಯಿತಲ್ಲ, ಹೊರಡೋಣ' ಎಂದೆ. ಹರಿಪ್ರಸಾದ್ ನಗುತ್ತ, 'ನಿಮ್ಮ ಮನೆಯ ಒತ್ತು ಶ್ಯಾವಿಗೆ ತುಂಬಾ ರುಚಿಕರ ಆಗಿದೆ ಎಂದು ಗೊತ್ತಾಯಿತು. ನನಗೆ ಉಳಿಸೇ ಇಲ್ಲ. ಇವರೆಲ್ಲಾ ಖಾಲಿ ಮಾಡಿದ್ದಾರೆ ನೋಡು' ಎಂದದ್ದು ಕೇಳಿ ಅಚ್ಚರಿ ಆಯಿತು. ತಕ್ಷಣ ನನ್ನಾಕೆಯನ್ನು ವಿಚಾರಿಸಿದೆ.

ಅದಕ್ಕವಳು, 'ಹರಿಯವರು ಡಯಟ್‌ನಲ್ಲಿ (DIET) ಇದ್ದಾರೆ ಎಂದು ಪರಿಚಯಿಸಿದಿರಲ್ಲ. ಅದಕ್ಕೇ ಅವರಿಗೆ ತಿಂಡಿ ಕೊಟ್ಟಿಲ್ಲ' ಎಂದಳು.



ವಾಸ್ತವವಾಗಿ ಹರಿ, District Institute Of Education Training (DIET)ನಲ್ಲಿ ಉಪನ್ಯಾಸಕರು. ವಿವರಿಸಿದ ಮೇಲೆ ವಿಷಯದ ಅರಿವಾಗಿ ಇಬ್ಬರೂ ಒಟ್ಟಿಗೆ ಉಪಾಹಾರ ಸೇವಿಸಿದೆವು.

**ನಗರ ಗುರುದೇವ್ ಭಂಡಾರ್ಕರ್**

---



### ಪ್ಯಾರ್ ಲೇ, ಪ್ಯಾರ್ ಲೇ...!

ಮುಂಬೈನಿಂದ ಬಂದಿದ್ದ ಗೆಳೆಯನ ಕುಟುಂಬದೊಂದಿಗೆ ಮಾರುಕಟ್ಟೆಗೆ ತೆರಳಿದ್ದೆವು. ಮಾರುಕಟ್ಟೆಯಲ್ಲಿ ಪೇರಲೆ ಹಣ್ಣು ಮಾರುವವ 'ಪ್ಯಾರ್ ಲೇ, ಪ್ಯಾರ್ ಲೇ' ಎಂದು ರಾಗವಾಗಿ ಕೂಗುತ್ತಿದ್ದ.

ಹಿಂದಿ ಮಿಶ್ರಿತ ಕನ್ನಡ ಮಾತಾಡುತ್ತಿದ್ದ ಅವನ ಪುಟ್ಟ ಮಗಳಿಗೆ ಪೇರಲೆಗೆ 'ಸೀಬೆಹಣ್ಣು' ಎಂಬುದು ತಿಳಿದಿತ್ತು. ಅದನ್ನು ಕೇಳಿ ಗೆಳೆಯನ ಮಗಳು, 'ನೋಡಪ್ಪಾ, ಪ್ಯಾರ್ ಲೇ, ಪ್ಯಾರ್ ಲೇ' ಅಂತಿದ್ದಾನೆ. ಪ್ರೀತಿ ಕೊಡುತ್ತಾನಂತೆ ತಗೊಳ್ಳಪ್ಪ' ಎಂದು ಮುಗ್ಧವಾಗಿ ಹೇಳಿದಾಗ ಅಲ್ಲಿದ್ದ ಎಲ್ಲರಿಗೂ ನಗು ತಡೆಯಲಾಗಲಿಲ್ಲ.

**ಅಭಿರಾಂ ಗುಂಡೂಮನೆ**